2



## ಕಾಲಕ್ಕೆ ತಕ್ಕಂತೆ ಬೆಳೆಯಿರಲಿ

ಪ್ರತಿ ಬೆಳೆಗೂ ತನ್ನದೇ ಆದ ವಾತಾವರಣದ ಅಗತ್ಯತೆಯಿದೆ. ಮೂಲತಃ ಉಷ್ಣವಲಯದ ಬೆಳೆಗಳು ಹೆಚ್ಚಿನ ತಾಪಮಾನ, ಆರ್ದ್ರತೆ ಬಯಸಿದರೆ, ಶೀತಲ ವಾತಾವರಣದ ಬೆಳೆಗಳು ತಂಪು, ಒಣ ಹವೆ ಬಯಸುತ್ತವೆ. ಹಾಗಾಗಿ ಬೀಜ ಕೊಳ್ಳುವ ಮುನ್ನ ಆಯಾ ಕಾಲಕ್ಕೆ ತಕ್ಕಂಥ ಬೆಳೆಗಳನ್ನು ಆಯ್ದುಕೊಂಡರೆ ಒಳಿತು.

ಬೇಸಿಗೆಯ ಆಯ್ಕೆ: ಟೊಮ್ಯಾಟೊ, ಬದನೆ, ಮೆಣಸು, ಮೂಲಂಗಿ, ಸೌತೆ, ಕುಂಬಳ, ಬೆಂಡೆ ಇತ್ಯಾದಿ. ಬೇಸಿಗೆ ಇವುಗಳ ಆದ್ಯತೆಯಾದರೂ ವರ್ಷಪೂರ್ತಿ ಬೆಳೆಯಬಲ್ಲ ಸುಲಭ ಬೆಳೆಗಳು. ಮೆಂತೆ, ಕೊತ್ತಂಬರಿ, ಹರಿವೆ, ಸಬ್ಬಸಿಗೆ ಸೊಪ್ಪು, ತರಕಾರಿಗಳನ್ನೂ ವರ್ಷಪೂರ್ತಿ ಬೆಳೆಯಬಹುದು.

ಮಳೆಗಾಲಕ್ಕೆ ಆಯ್ಕೆ: ಹೀರೆ, ಪಡುವಲ, ಸೋರೆ ಇತ್ಯಾದಿ. ಹೂಗಳು: ಚೆಂಡು ಹೂ, ಕಾಸ್ಮೋಸ್, ಡೇರೆ.

ಚಳಿಗಾಲಕ್ಕೆ ಯಾವುದು?: ದೊಣ್ಣೆ ಮೆಣಸು, ಬಟಾಣಿ, ಚೌಳಿಕಾಯಿ, ಎಲೆಕೋಸು, ಹೂಕೋಸು, ಗೆಡ್ಡೆಕೋಸು, ಬೀಟ್ರೂಟ್, ಗಜ್ಜರಿ, ಬ್ರೊಕೊಲಿ, ಕೇಲ್. ಹೂಗಳು: ಸೇವಂತಿಗೆ, ಪೆಟುನಿಯಾ, ಪ್ಯಾನ್ಸಿ, ಆಸ್ಟರ್ ಇತ್ಯಾದಿ.

ಇದೇನು ಕಟ್ಟುನಿಟ್ಟಾಗಿ ಪಾಲಿಸಬೇಕಾದ ನಿಯಮಗಳಲ್ಲ. ಈಗಂತೂ ಯಾವುದೇ ವಾತಾವರಣವನ್ನೂ ಸಹಿಸಬಲ್ಲ ಸುಧಾರಿತ ತಳಿಗಳು ಲಭ್ಯವಿವೆ. ವಾತಾವರಣವೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುವ ಕಾರಣ ಎಲ್ಲಾ ಕಡೆಗೆ ಇದೇ ಫಲಿಸುತ್ತದೆನ್ನುವುದು ಸಾಧ್ಯವಿಲ್ಲ.

3

## ಮಣ್ಣಿನ ಫಲವತ್ತತೆಗೆ ಗಮನ ಕೊಡಿ

ಸಸ್ಯಗಳ ಒಟ್ಟಾರೆ ಬೆಳವಣಿಗೆ ಅವಲಂಬಿತವಾಗಿರುವುದು ಮಣ್ಣಿನ ಫಲವತ್ತತೆ ಮೇಲೆ. ಮಣ್ಣು ಆರೋಗ್ಯಕರವಾಗಿದ್ದರೆ ನಾವು ಬೆಳೆದ ತರಕಾರಿಗಳೂ ಸ್ವಾದಿಷ್ಟ ಮತ್ತು ಪೌಷ್ಟಿಕ. ಮಣ್ಣಿನ ರಸಸಾರ, ಪೋಷಕಾಂಶಗಳ ಪ್ರಮಾಣ ಫಲವತ್ತತೆಯನ್ನು ನಿರ್ಧರಿಸುವ ಮುಖ್ಯ ಅಂಶಗಳು. ಹಾಗಾಗಿ ನಮ್ಮ ಕೈತೋಟದ ಮಣ್ಣಿನ ಫಲವತ್ತತೆ ಕಾಪಾಡಲು ಆಗಾಗ ಕಳಿತ ಗೊಬ್ಬರ ಹಾಕುತ್ತಿರಬೇಕು.

ಹಿತ್ತಲ ತೋಟವಾದರೆ ಮಣ್ಣನ್ನು ಸಡಿಲವಾಗಿಸಿ ಹದವಾಗಿಸುವುದು, ತರಕಾರಿ ಮಡಿ ತಯಾರಿಕೆ, ಮಡಿಗಳಿಗೆ ಕಳಿತ ಎರೆಗೊಬ್ಬರ ಅಥವಾ ಕೊಟ್ಟಿಗೆ ಗೊಬ್ಬರ ಮಿಶ್ರಣ ಮಾಡುವುದನ್ನು ಅನುಸರಿಸಬಹುದು. ತಾರಸಿ ತೋಟವಾದರೆ ಮಣ್ಣಿನ ಮಿಶ್ರಣ ತಯಾರಿಸುವ ಅವಕಾಶ ನಮ್ಮ ಕೈಯಲ್ಲೇ ಇದೆ. ಸಸ್ಯಗಳಿಗೆ ಸಾರಜನಕ, ರಂಜಕ, ಪೊಟ್ಯಾಶ್ (N:P:K) ಎನ್ನುವ ತ್ರಿಮೂರ್ತಿಗಳ ಅವಶ್ಯಕತೆ ಅತ್ಯಧಿಕವಾಗಿರುತ್ತದೆ. ಸಾವಯವ ಗೊಬ್ಬರದಲ್ಲಿ ಇವುಗಳ ಪ್ರಮಾಣ ಕಡಿಮೆ. ಹಾಗಾಗಿ ಸಾವಯವದ ಜೊತೆ ಶಿಫಾರಸ್ಸಿನ ಅನುಸಾರ ರಾಸಾಯನಿಕ ಗೊಬ್ಬರ (ಯೂರಿಯಾ, DAP, MOP ಇತ್ಯಾದಿ) ಬಳಸಬಹುದು.





4

## ಬೀಜಗಳ ಬಿತ್ತನೆ, ಸಸ್ಯಗಳ ನಡುವಿನ ಅಂತರ

ಬೆಂಡೆ, ಬೀನ್ಸ್, ಬಟಾಣಿ, ಗಜ್ಜರಿ, ಮೂಲಂಗಿ, ಬೀಟ್ರೂಟ್‌ನಂಥ ಗೆಡ್ಡೆ ತರಕಾರಿಗಳು, ಸೊಪ್ಪು ತರಕಾರಿಗಳ ಬೀಜಗಳನ್ನು ನೇರವಾಗಿ ಬಿತ್ತಲಾಗುತ್ತದೆ. ಟೊಮ್ಯಾಟೊ, ಬದನೆ, ಮೆಣಸು, ಹೂಕೋಸು, ಕ್ಯಾಬೇಜ್, ಸೌತೆ ಜಾತಿಯ ತರಕಾರಿ ಮತ್ತು ಹೂವಿನ ಬೀಜಗಳನ್ನು ಮೂರು ನಾಲ್ಕು ವಾರಗಳ ಕಾಲ ಬೆಳೆಸಿ ಕಿತ್ತು ನೆಡಬಹುದಾಗಿದೆ. ಹೀಗೆ ಕಿತ್ತು ನೆಡಬಹುದಾದ ತರಕಾರಿಗಳನ್ನು ಕೋಕೊ ಪೀಟ್ ಮಾಧ್ಯಮದಲ್ಲಿ ಚಿಕ್ಕದೊಂದು ಪಾಟ್ ಅಥವಾ ಟ್ರೇನಲ್ಲಿ ಮೊದಲು ಬೆಳೆಸಿ ನಂತರ ನೆಲಕ್ಕೆ/ಗ್ರೋಬ್ಯಾಗ್/ಪಾಟ್‌ನಲ್ಲಿ ನೆಡಬಹುದು. ಇದು ತರಕಾರಿಗಳನ್ನು ಬೆಳೆಸುವ ಪರಿಣಾಮಕಾರಿ ವಿಧಾನ.

ಕಡಿಮೆ ಜಾಗದಲ್ಲಿ ಹೆಚ್ಚೆಚ್ಚು ಗಿಡಗಳನ್ನು ತುರುಕುವುದು ಒಳ್ಳೆಯದಲ್ಲ. ಇದು ಇಳುವರಿ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ಇರುವ ಜಾಗಕ್ಕೇ ಯಾವ ತರಕಾರಿಯನ್ನು ಎಷ್ಟು ಅಂತರದಲ್ಲಿ ಎಂದು ಮೊದಲೇ ಯೋಜನೆ ಮಾಡುವುದು ಒಳಿತು. ಇದು ಗಿಡವೊಂದರ ಉತ್ಪಾದಕತೆ ಹೆಚ್ಚಿಸಲು ಉಪಕಾರಿ. ಜೊತೆಗೆ ಕೀಟ–ರೋಗಗಳನ್ನು ನಿರ್ವಹಿಸಲೂ ಸುಲಭ. ಬೆಳೆಗಳು ಸೊಂಪಾಗಿ ಬೆಳೆಯಲು ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಒಂದೂವರೆಯಿಂದ ಎರಡಡಿ ಅಂತರ ಸೂಕ್ತ.

